


ಕೆಟ್ಟ ನಾಟಕದಿಂದ ಎದ್ದು ಹೋಗುತ್ತಿದ್ದ ಬರ್ನಾರ್ಡ್ ಷಾ ಅವರನ್ನು ತಡೆದ ಪ್ರೇಕ್ಷಕರೊಬ್ಬರು, 'ಸ್ವಲ್ಪ ಹೊತ್ತು ಕೂತಿರಿ. There is a kick at the end of the play' (ನಾಟಕದ ಕೊನೆಯಲ್ಲಿ ಒಳ್ಳೆ ಕಿಕ್ ಇದೆ) ಅಂದರು. ಅದಕ್ಕೆ ಷಾ ಅವರು, 'Give it to the author' (ಅದನ್ನು ನಾಟಕ ಬರೆದವರಿಗೆ ಕೊಡಿ) ಎಂದರು.

***

ವಿಶ್ವನಿಗೆ ಅಪಘಾತವಾಯಿತು. ಮುಖವೆಲ್ಲ ಆಂಜನೇಯನಂತೆ ಊದಿತ್ತು. ಆಸ್ಪತ್ರೆಯಲ್ಲಿ ನರ್ಸ್ ಚೆನ್ನಾಗಿ ಆರೈಕೆ ಮಾಡಿದಳು. ವಿಶ್ವ ಮೊದಲಿನಂತಾದ. ಡಿಸ್‌ಚಾರ್ಜ್ ಆಗುವ ಸಮಯದಲ್ಲಿ ಸೇವೆ ಮಾಡಿದ ನರ್ಸ್ ವಯ್ಯಾರದಿಂದ 'ನನ್ನನ್ನು ವಿಚಾರಿಸಿಕೊಳ್ಳಿ' ಎಂದು ಕೇಳಿದಳು.

'ನಿಮ್ಮ ಆರೈಕೆಯಿಂದ ಮೊದಲಿನಂತಾದೆ' ಎಂದ ವಿಶ್ವ ಆಕೆಗೆ 1000 ರೂಪಾಯಿ ನೀಡಿದ. ಆದರೆ ನರ್ಸ್ ಅದನ್ನು ಮುಟ್ಟಲಿಲ್ಲ. 'ನಾನು ನಿಮಗೆ ಹಲ್ಲು ಉಜ್ಜಿದೆ, ಸ್ನಾನ ಮಾಡಿಸಿದೆ, ತಲೆ ಬಾಚಿದೆ ಅದಕ್ಕೆ ಕೇವಲ 1000 ರೂಪಾಯಿ ಮಾತ್ರವೇ' ಎಂದು ಪ್ರಶ್ನಿಸಿದಳು.

ವಿಶ್ವ ಮತ್ತೊಂದು 1000 ರೂ ಸೇರಿಸಿ, 'ತೆಗೆದುಕೊಳ್ಳಿ. ನಾನಿನ್ನು ಬರುತ್ತೇನೆ' ಎಂದ. ಮತ್ತದೇ ದುರಾಸೆಯೊಂದಿಗೆ ನರ್ಸ್, 'ನಾನು ನಿಮಗೆ ಹಲ್ಲು ಉಜ್ಜಿದೆ, ಸ್ನಾನ ಮಾಡಿಸಿದೆ, ತಲೆ ಬಾಚಿದೆ ಅದಕ್ಕೆ ಕೇವಲ 2000 ರೂಪಾಯಿ ಮಾತ್ರವೇ' ಎಂದು ಕೇಳಿದಳು.

ವಿಶ್ವ 2000 ರೂಪಾಯಿಯನ್ನು ತನ್ನ ಜೇಬಿಗೆ ಸೇರಿಸಿ, ಕಾತುರತೆಯಿಂದ ಕಾಯುತ್ತಿದ್ದ ನರ್ಸ್‌ಗೆ 'ನರ್ಸ್ ಅಮ್ಮ, ನಿಮ್ಮ ಸೇವೆಯನ್ನು ದುಡ್ಡಿನಿಂದ ಅಳೆದು ತೀರಿಸಲು ಸಾಧ್ಯವಿಲ್ಲ. ಬನ್ನಿ, ನಾನೂ ನಿಮಗೆ ಹಲ್ಲುಜ್ಜಿ, ಸ್ನಾನ ಮಾಡಿಸಿ, ತಲೆ ಬಾಚುತ್ತೇನೆ' ಎಂದ.

***

ಸೀನು ಮತ್ತು ಸುಬ್ಬು ಆಪ್ತ ಗೆಳೆಯರು. ಇಬ್ಬರಿಗೂ ಕ್ರಿಕೆಟ್ ಹುಚ್ಚು. ಇಬ್ಬರಲ್ಲಿ ಯಾರು ಮೊದಲು ಸಾಯುತ್ತಾರೋ ಅವರು ಸ್ವರ್ಗದಲ್ಲಿ ಕ್ರಿಕೆಟ್ ಇದೆಯೋ ಇಲ್ಲವೋ ಎಂಬುದರ ಬಗ್ಗೆ ಇನ್ನೊಬ್ಬರಿಗೆ ತಿಳಿಸಬೇಕೆಂದು ಒಪ್ಪಂದವಾಯಿತು. ಒಂದು ದಿನ ಸುಬ್ಬು ತೀರಿಕೊಂಡ. ಕೆಲದಿನಗಳ ನಂತರ ಸೀನುವಿಗೆ ಸುಬ್ಬನ ದನಿ ಕೇಳಿದಂತಾಯಿತು.

ಸುಬ್ಬು: ಗೆಳೆಯ ಸೀನು?

ಸೀನು: ಹೌದು ನಾನೇ ಸೀನು.

ಸುಬ್ಬು: ಸೀನು, ನನಗೆ ನಂಬೋಕ್ಕೆ ಸಾಧ್ಯವಾಗುತ್ತಿಲ್ಲ.

ಸೀನು: ಏನು? ಬೇಗ ಹೇಳು ಸ್ವರ್ಗದಲ್ಲಿ ಕ್ರಿಕೆಟ್ ಇದೆಯೇ?

ಸುಬ್ಬು: ನನ್ನ ಬಳಿ ಈಗ ಒಳ್ಳೆಯ ಹಾಗೂ ಕೆಟ್ಟ ಸುದ್ದಿ ಎರಡೂ ಇದೆ. ಒಳ್ಳೆಯ ಸುದ್ದಿ ಎಂದರೆ ಸ್ವರ್ಗದಲ್ಲಿ ಕ್ರಿಕೆಟ್ ಇದೆ. ಕೆಟ್ಟ ಸುದ್ದಿ ಎಂದರೆ ನಾಳೆಯ ರಾತ್ರಿಯ ಆಟಕ್ಕೆ ನೀನೇ ಪ್ರಾರಂಭದ ಬೌಲರ್.

***

ಕುಟುಂಬ ಯೋಜನಾ ಅಧಿಕಾರಿಯೊಬ್ಬರು ಸಭೆಯನ್ನುದ್ದೇಶಿಸಿ ಮಾತನಾಡುತ್ತಿದ್ದರು.

ಅಧಿಕಾರಿ: ಪ್ರತಿ ಸೆಕೆಂಡಿಗೆ ಒಂದು ಹೆಂಗಸು ಒಂದು ಮಗುವಿಗೆ ಜನ್ಮ ನೀಡುತ್ತಿದ್ದಾಳೆ. ಹೀಗಾದರೆ ಜನ ಸಂಖ್ಯೆಯನ್ನು ನಿಯಂತ್ರಿಸುವುದಾದರೂ ಹೇಗೆ?

ಸಭೆಯಲ್ಲಿದ್ದವ: ಆ ಹೆಂಗಸನ್ನು ಕಂಡುಹಿಡಿದು ಮಕ್ಕಳಾಗದಂತೆ ಆಪರೇಷನ್ ಮಾಡಿಸಿಬಿಡಬೇಕು!

***

ಮಧ್ಯ ರಾತ್ರಿ ಮನೆಗೆ ನುಗ್ಗಿದ ಕಳ್ಳರು ಮನೆಯಾತನನ್ನು ಕಟ್ಟಿಹಾಕಿ ಹಣ, ಆಭರಣ ಎಲ್ಲವನ್ನೂ ದೋಚಿದರು. ಹೋಗುವ ಮೊದಲು 10 ಲಾಟರಿ ಟಿಕೆಟ್‌ಗಳನ್ನು ಟೇಬಲ್ ಮೇಲೆ ಇಟ್ಟರು.

ಮನೆಯಾತ: ಎಲ್ಲ ದೋಚಿದ ಮೇಲೆ ಈ ಲಾಟರಿ ಟಿಕೆಟ್ ಯಾಕೆ ಕೊಡ್ತಿದ್ದೀರಾ?

ಕಳ್ಳರು: ನಿಮ್ಮ ದುರದೃಷ್ಟಕ್ಕೆ ದರೋಡೆ ಆಯ್ತು. ನಿಮಗೆ ಅದೃಷ್ಟ ಇದ್ರೆ ಹತ್ತು ಲಕ್ಷ ಬಂಪರ್ ಹೊಡೆಯುತ್ತೆ. ನಾವು ಕಳ್ಳತನ ಮಾಡುವ ಮನೆಗಳಿಗೆಲ್ಲ ಈ ರೀತಿ ಟಿಕೆಟುಗಳನ್ನು ಉಚಿತವಾಗಿ ಕೊಡ್ತೀವಿ. ಇದು ನಮ್ಮ ವೃತ್ತಿಧರ್ಮ.

***

ಸಾಕ್ಷಿ ಹೇಳಲು ಬಂದಿದ್ದ ರಂಗನನ್ನು ವಕೀಲರು ಹೀಗೆ ಕೇಳಿದರು.

ವಕೀಲರು: ಕಟಕಟೆಯಲ್ಲಿ ನಿಂತಿರುವ ಆರೋಪಿ ನಿನಗೆ ಗೊತ್ತಾ?

ರಂಗ: ಗೊತ್ತು ಸ್ವಾಮಿ.

ವಕೀಲರು: ಅವನು ಒಬ್ಬನೇ ಇದ್ದಾಗ ತನ್ನಷ್ಟಕ್ಕೆ ತಾನೇ ಮಾತಾಡಿಕೊಂಡನೆ. ಇದು ಸತ್ಯನಾ?

ರಂಗ: ಹೇಳಕ್ಕಾಗಲ್ಲ ಸ್ವಾಮಿ. ಅವನು ಒಬ್ಬನೇ ಇದ್ದಾಗ ನಾನು ಅವನ ಜೊತೆ ಇರೋಲ್ಲ.

***

ವಿಶ್ವ ನಾಟಕದಲ್ಲಿ ಅಭಿನಯಿಸಿದ್ದ. ಮಡದಿ ವಿಶಾಲು ನಾಟಕವನ್ನು ನೋಡಲು ಕಲಾಕ್ಷೇತ್ರಕ್ಕೆ ಬಂದಳು.

ಸಿಬ್ಬಂದಿ: ಮೇಡಂ, ಟಿಕೆಟ್?

ವಿಶಾಲು: ನಾನು ಇವತ್ತಿನ ನಾಟಕದ ಹೀರೊ ವಿಶ್ವ ಅವರ ಹೆಂಡತಿ, ನಾನು ಬಂದ್ರೆ ಉಚಿತವಾಗಿ ಬಿಡಬೇಕು ಅಂತ ಹೇಳಿರಬೇಕಲ್ಲ?

ಸಿಬ್ಬಂದಿ: ಹೌದು ಮೇಡಂ, ಆದರೆ ಈಗಾಗಲೇ ಇಬ್ಬರು ಅವರ ಹೆಂಡತಿ ಅಂತ ಹೇಳಿಕೊಂಡು ಬಂದ್ರು, ಅವ್ರನ್ನ ಒಳಗೆ ಕಳುಹಿಸಿದ್ದೀನಿ. ನೀವು ಹೋಗಿ. ಇನ್ನು ಎಷ್ಟು ಹೆಂಡ್ತೀರು ಬರುತ್ತಾರೋ ಗೊತ್ತಿಲ್ಲ.

***




ಒಂದು ಕಂಪನಿ ತಡವಾಗಿ ಬರುವ ತನ್ನ ಕೆಲಸಗಾರರಲ್ಲಿ ಶಿಸ್ತು ತರಲು ಒಂದು ರಿಜಿಸ್ಟರ್ ಇಟ್ಟು, ತಡವಾಗಿ ಬರುವವರು ಅದರಲ್ಲಿ ಕಾರಣವನ್ನು ಬರೆದು ರುಜು ಹಾಕಲು ತಿಳಿಸಿತ್ತು. ಅಂದು ತಡವಾಗಿ ಬಂದ ಮೊದಲನೆಯ ಕೆಲಸಗಾರ ಮಳೆಯ ಕಾರಣ ತಡವಾಯಿತೆಂದು ನಮೂದಿಸಿ ಸಹಿ ಮಾಡಿದ್ದ. ನಂತರ ಬಂದ ಕೆಲಸಗಾರರು ಮೇಲಿನ ಕಾರಣವೇ ತಮ್ಮದೆಂದು 'ಡಿಟ್ಟೋ' ಎಂದು ಹಾಕಿ ಸಹಿ ಮಾಡಿದರು. ಇದೇ ಅಭ್ಯಾಸವಾಗಿ ಮುಂದೆ ಒಂದು ದಿನ ಒಬ್ಬ ಕೆಲಸಗಾರ ಕಾರಣದ ಕಾಲಂನಲ್ಲಿ ತನ್ನ ಹೆಂಡತಿಗೆ ಹೆರಿಗೆಯಾಗಿ ಅವಳಿ ಮಕ್ಕಳ ಜನನ ಎಂದು ಕಾರಣ ಬರೆದಿದ್ದ. ಅದನ್ನು ಗಮನಿಸದೇ ಮುಂದೆ ತಡವಾಗಿ ಬಂದ 20 ಕೆಲಸಗಾರರು 'ಡಿಟ್ಟೋ' ಎಂದು ನಮೂದಿಸಿ ಸಹಿ ಮಾಡಿದ್ದರು.

ಸಂಗ್ರಹ: ರಮೇಶ್ ಎಸ್.